ಸಂದರ್ಶನ ಮಾಡಲು ಬರುತ್ತಾನೆ. ಅವರಿಬ್ಬರ ಮುಖಾಮುಖಿಯನ್ನು ಈ ಕತೆ ಶೋಧಿಸುತ್ತದೆ... ಈ ಕತೆಗೆ ಬಂದ ಕೆಲವು ಪ್ರತಿಕ್ರಿಯೆಗಳ ನಡುವೆ ನಾಲ್ಕು ವಿಭಿನ್ನ ಮಾದರಿಗಳು ಹೀಗಿದ್ದವು:

'ಸುಧಾ'ದಲ್ಲಿ ಈ ಕತೆ ಪ್ರಕಟವಾದ ವಾರ ಯು.ಆರ್. ಅನಂತಮೂರ್ತಿಯವರ ಮಹಿಳಾ ಅಭಿಮಾನಿಯೊಬ್ಬರ ಪ್ರತಿಕ್ರಿಯೆ: 'ಏನು! ಈತ ಆ ಕತೆಯಲ್ಲಿ ಅನಂತಮೂರ್ತಿಯನ್ನ ತೀಡಿ ಹಾಕಿದ್ದಾನೆ!'

ಈ ಕತೆ ಪುಸ್ತಕರೂಪದಲ್ಲಿ ಪ್ರಕಟವಾದಾಗ, ಅನಂತಮೂರ್ತಿಯವರು ನಗುತ್ತಾ ನೀಡಿದ ಪ್ರತಿಕ್ರಿಯೆ: 'ಏಯ್! ಆ ಜ್ಞಾನಪೀಠದ ಕತೆ ಭಾಳಾ wittyಯಾಗಿದೆ ಕಣಯ್ಯಾ.'

ಚಂದ್ರಶೇಖರ ಕಂಬಾರರು ನಗುತ್ತಾ ಫೋನಿನಲ್ಲಿ ನೀಡಿದ ಪ್ರತಿಕ್ರಿಯೆ: 'ನನಗಂತೂ ಈ ಕತೆ ನನ್ನ ಮೇಲೇ ಬರೆದಂಗಿದೆ ಅನ್ನಸ್ತೆ ಕಣ್ರೀ!'

'ಲಂಕೇಶ್ ಪತ್ರಿಕೆ'ಯ ಬಿ. ಚಂದ್ರೇಗೌಡರ ಪ್ರತಿಕ್ರಿಯೆ:' ಏ! ಈ ಕತೇಲಿ ನೀನೂ ಲಂಕೇಶ್ನೂ ಕುಂತ್ಕಂಡು ಮಾತಾಡ್ದಂಗಾಯ್ತು ಪ್ಪಾ!'

ನಾನು ಕತೆ ಬರೆಯಹೊರಟಾಗ ಈ ಜ್ಞಾನಪೀಠ ಪ್ರಶಸ್ತಿ ವಿಜೇತರಂತೂ ನನ್ನ ಮನಸ್ಸಿನಲ್ಲಿರಲೇ ಇಲ್ಲ. ಆದರೆ ಬರವಣಿಗೆಯ ಪ್ರಕ್ರಿಯೆಯಲ್ಲಿ ಏನಾಯಿತೋ... ಓದುಗರು ಅದನ್ನು ಹೇಗೆ ಸ್ವೀಕರಿಸಿದರೋ ಎಂದು ವಿಸ್ಮಯಗೊಳ್ಳುತ್ತಾ... ನನಗೂ ಓದುಗರು ಓದುತ್ತಿರುವ ರೀತಿಯೇ ಸರಿಯಿರಬಹುದೇನೋ ಅನ್ನಿಸತೊಡಗಿತು! 'ಕೃತಿ ರಚನೆಯ ನಂತರ ಕೃತಿಕಾರ ಸಾಯುತ್ತಾನೆ; ಓದುಗ ಹುಟ್ಟುತ್ತಾನೆ' ಎಂದ ರೋಲಾ ಬಾರ್ಥ್ ಮಾತು ಎಷ್ಟು ನಿಜ, ಅಲ್ಲವೆ!

● 'ಇದನ್ನು ಬೇರೆ ರೀತಿ ಬರೆಯಬಹುದಿತ್ತು' ಎಂದು ಯಾವುದಾದರೂ ಕತೆಯನ್ನು ಬರೆದ ನಂತರ ನಿಮಗೆ ಅನ್ನಿಸಿದೆಯೆ?

ಯಾವುದಾದರೂ ಒಂದು ಕತೆಯನ್ನಲ್ಲ, ನನ್ನ ಅನೇಕ ಕತೆಗಳನ್ನು ಹಾಗೆ ಬೇರೆ ರೀತಿ ಬರೆಯಬಹುದು ಎನ್ನಿಸಿದೆ! ಒಮ್ಮೆ ಪ್ರಕಟವಾದ ಕತೆಯನ್ನು ಒಮ್ಮೆ ಓದಿದ ಮೇಲೆ, ಮತ್ತೆ ಓದಲು ನಾನು ಹಿಂಜರಿಯುವುದು ಈ ಕಾರಣಕ್ಕಾಗಿಯೇ ಇರಬಹುದು! ಯಾವುದೋ ವರ್ಣನೆಯ ಹುಸಿತನ, ಇನ್ಯಾವುದೋ ಉತ್ಪ್ರೇಕ್ಷೆ, ಮತ್ತಾವುದೋ ವಾಕ್ಯ ರಚನೆಯ ಸಂದಿಗ್ಧತೆ, ಕೊಂಚ ಹೇರಿದಂತೆ ಕಾಣುವ ಮುಕ್ತಾಯ... ಹೀಗೆ ಹಲವಾರು ಸಮಸ್ಯೆಗಳು ನನಗೇ ಕಾಣತೊಡಗುತ್ತವೆ. ಅದರ ನಡುವೆಯೂ, ನನಗೆ ಸಾಧ್ಯವಾದಷ್ಟು ಪರಿಪೂರ್ಣವಾಗಿವೆ ಎನ್ನಿಸಿದ ಕತೆಗಳೂ ಇವೆ. ನನ್ನನ್ನು ಮೀರಿ ತಂತಾನೇ ಎತ್ತಲೋ ಹರಿದ ನನ್ನ 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' ಇಂಥ ಕತೆಯಿರಬಹುದು. ಆದರೂ... ಒಬ್ಬ ಜನಪದ ಕತೆಗಾರ್ತಿಯಂತೆ ಇವತ್ತು ಹೇಳಿದ ಕತೆಯನ್ನು ನಾಳೆ ಬೇರೆ ಥರ ಹೇಳುವ ಭಾಗ್ಯವಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನ್ನಿಸಿದ್ದಿದೆ. ಇದು ಕತೆ ಬರೆಯುವ ಎಲ್ಲರ ಬಯಕೆಯೂ ಆಗಿರಬಹುದು.

● ನಿಮಗೇ ಗೊತ್ತಿರುವಂತೆ ನಿಮ್ಮ ಕತೆಗಳ ಮಿತಿ ಏನು? ಕನ್ನಡ ಕಥಾ ಪರಂಪರೆಯಲ್ಲಿ ಅವು ಎಲ್ಲಿ ನಿಲ್ಲುತ್ತವೆ ಎಂಬುದು ನಿಮ್ಮ ಅಭಿಪ್ರಾಯ?

ಜಗತ್ತಿನ ಶ್ರೇಷ್ಠ ಕತೆಗಳನ್ನು ಓದಿದಾಗ ನನ್ನ ಕತೆಯ ಮಿತಿಗಳು ಒಂದಲ್ಲ, ಒಂದು ಸಾವಿರ ಇವೆ ಅನ್ನಿಸುತ್ತದೆ! ಆಗ ನಿಷ್ಠುರ ಮೌಲ್ಯಮಾಪನ ತಂತಾನೇ ಹುಟ್ಟುತ್ತದೆ. ಆದರೂ ಕನ್ನಡ ಕಥಾಪರಂಪರೆಯ ಗಂಭೀರ ಕತೆಗಳ ಯಾವುದೋ ಮೂಲೆಯಲ್ಲಾದರೂ ಈ ಕತೆಗಳಿಗೆ ಜಾಗ